ಸಾಲವನ್ನು ಕೊಡದಿದ್ದರೆ ಅವರಮೇಲೆ ಬ್ಯಾಂಕ್‌ನವರು ಕ್ರಮ ತೆಗೆದುಕೊಳ್ಳುತ್ತಾರೆ. ಅವರು ಕ್ರಮ ತೆಗೆದುಕೊಂಡು ಸಾಲ ವಸೂಲ್ಮಾಡುವುದಕ್ಕೆ ಮಾಡತಕ್ಕ ವ್ಯವಹಾರದ ಖರ್ಚನ್ನೂ ಕೂಡ ಈ ಫಲಾನುಭವಿಗಳ ಮೇಲೆ ಹಾಕುತ್ತಾರೆ. ನಾನು ಈ ಹಿಂದೆಯೂ ಕೂಡ ಇದೇ ಸದಸದಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದೆ. ಆಗಲೂ ಕೂಡ ಅಂತಿಮವಾಗಿ ಇದು ತೀರ್ಮಾನ ಆಗಲಿಲ್ಲ. ಆದ್ದರಿಂದ ಸಧ್ಯದ ಮಟ್ಟಿಗಾದರೂ ಸಾಲ ವಸೂಲಾತಿ ಕ್ರಮವನ್ನು ತಡಹಿಡಿಯುವುದಕ್ಕೆ ಬ್ಯಾಂಕಿನ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತೀರಾ ?

ಇನ್ನೊಂದು ವಿಚಾರ ಎಂದರೆ, ಇನ್ನು ೩ ತಿಂಗಳಲ್ಲಿ ಇದರ ಬಗ್ಗೆ ಸರ್ಕಾರ ಒಂದು ಅಂತಿಮ ತೀರ್ಮಾನವನ್ನು ಕೈಗೊಳ್ಳುತ್ತದೆಯೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಆಗಲಿ ಸಾಲವನ್ನು ವಸೂಲ್ಮಾಡಕೂಡದೆಂದು ಬ್ಯಾಂಕ್‌ನ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಸ್ವಾಮಿ, ಬಯೋಗ್ಯಾಸ್‌ನ ತಂತ್ರಜ್ಞಾನವೇ ಸರಿಯಾಗಿಲ್ಲ ಅಂದಮೇಲೆ ರಿಪೇರಿ ಮಾಡಿಸತಕ್ಕ ಪ್ರಶ್ನೆಯೇ ಬರುವುದಿಲ್ಲ. ನಮ್ಮ ಇಡೀ ಕೋಲಾರ ಜಿಲ್ಲೆಯಲ್ಲಿ ಒಂದೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಒಂದೊಂದು ಯಂತ್ರಕ್ಕೆ ಎರಡೆರಡು ಸಾವಿರದಂತೆ ಕೊಟ್ಟರೆ ನಮ್ಮ ಖಜಾನೆಗೆ ನಷ್ಟವಾಗುತ್ತದೆ. ಈ ಬಯೋಗ್ಯಾಸ್‌ನ ನಿರ್ಮಾಣದ ತಾಂತ್ರಿಕಜ್ಞಾನ ಸರಿಯಾಗಿಲ್ಲ. ಆದ್ದರಿಂದ ಇದರಲ್ಲಿ ರಿಪೇರಿಯ ಪ್ರಶ್ನೆಯೇ ಬರುವುದಿಲ್ಲ, ನನ್ನ ಒಂದು ಸಲಹೆ ಎಂದರೆ ಈ ಯಂತ್ರವನ್ನು ಗೋಬರ್ ಗ್ಯಾಸ್ ಪ್ಲಾಂಟ್ ಆಗಿ ಪರಿವರ್ತನೆ ಮಾಡಿ ಅದಕ್ಕೆ ಒಂದೂ ಡ್ರಂ ಕೊಡುವುದಕ್ಕೆ ಸಾಧ್ಯವಾದರೆ ಕೊಡಬಹುದು. ನಿಮಗೆ ತಾಂತ್ರಿಕ ಜ್ಞಾನದ ಮಾಹಿತಿಯನ್ನು ಕೊಟ್ಟಿರುವವರು ಸರಿಯಾಗಿ ಕೊಟ್ಟಿಲ್ಲ. ಆದ್ದರಿಂದ ಇದನ್ನು ಗೋಬರ್ ಗ್ಯಾಸ್ ಪ್ಲಾಂಟ್ ಆಗಿ ಪರಿವರ್ತನೆ ಮಾಡಿನೋಡಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಇದರಲ್ಲಿ ತಾಂತ್ರಿಕ ಜ್ಞಾನದ ದೋಷ ಇದೆಯೆಂದು ನಾನು ಭಾವಿಸುವುದಿಲ್ಲ. ಏಕೆಂದರೆ ೬ ಸಾವಿರ ಸ್ಥಾವರಗಳನ್ನು ತಯಾರಿಸಿದ್ದು ಅದರಲ್ಲಿ ೧೯೮೫ ಕೆಟ್ಟಿವೆ. ಇವುಗಳಲ್ಲಿಯೂ ಕೂಡ ಸುಮಾರು ೬ ನೂರಂ ಚಿಲ್ಲರೆ ರಿಪೇರಿ ಮಾಡಲಾಗಿದೆ. ಅವೆಲ್ಲವೂ ಚೆನ್ನಾಗಿ ಕೆಲಸ ಮಾಡುತ್ತಿವೆ. ಸುಮಾರು ೪ ಸಾವಿರ ಚಿಲ್ಲರೆ ಸ್ಥಾವರಗಳು ಚೆನ್ನಾಗಿ ಕೆಲಸಮಾಡುತ್ತಿರುವುದರಿಂದ ಇದರಲ್ಲಿ ತಾಂತ್ರಿಕ ಜ್ಞಾನದ ದೋಷವಿರಲಾರದು. ರಿಪೇರಿ ಕೆಲಸ ಮಾಡುವವರಿಗೆ ತಾಂತ್ರಿಕ ಜ್ಞಾನದ ಕೊರತೆ ಇದೆಯೆಂದಂ ಹೇಳಬಹುದು. ಮಾನ್ಯ ಸದಸ್ಯರು ಹೇಳಿದಂತೆ ಇದನ್ನು ಗೋಬರ್ ಗ್ಯಾಸ್ ಪ್ಲಾಂಟ್ ಆಗಿ ಪರಿವರ್ತನೆ ಮಾಡಿ ಡ್ರಂ ಟೈಪ್ ಮಾಡುವುದಾದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ನಮ್ಮ ಕೋಲಾರ ಜಿಲ್ಲೆಯಲ್ಲಿ ಕೊಟ್ಟಿರತಕ್ಕ ಬಯೋಗ್ಯಾಸ್ ಒಂದು ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕೆಲಸ ಮಾಡುತ್ತಿಲ್ಲವೆಂದರೆ ಅದು ಯಾವುದಂ ಏನು ಎನ್ನುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಬೈಲಹೊಂಗಲ ಪಟ್ಟಣದಲ್ಲಿ ಹೆಚ್ಚಿನ ನೀರಿನ ಶೇಖರಣೆಗಾಗಿ ಜಲಸಂಗ್ರಹಾಗಾರವನ್ನು ನಿರ್ಮಿಸುವುದು

೭೧೭. ಶ್ರೀ ಎಸ್. ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೈಲಹೊಂಗಲ ಪಟ್ಟಣದಲ್ಲಿ ಹೆಚ್ಚಿನ ನೀರಿನ ಶೇಖರಣೆಗಾಗಿ ನೆಲಮಟ್ಟದ, ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವ ಮತ್ತು ವಿತರಣಾ ವ್ಯವಸ್ಥೆಯನ್ನು ಪುನರ್ ರೂಪಿಸುವ ಅವಶ್ಯಕತೆ ಇದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಸರ್ಕಾರದ ಪತ್ರ ಕ್ರಮಾಂಕ ಹೆಚ್‌ಯಂ ೬ ಯಂಡಬ್ಲ್ಯೂಎಸ್ ೮೭ರ ದಿನಾಂಕ ೧೬-೩-೧೯೮೭ರ ಆದೇಶದಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು

ನಿರ್ವಾಹಕ ನಿರ್ದೇಶಕರು ಕೆಲಸವನ್ನು ತೆಗೆದುಕೊಳ್ಳಲು ಅಂದಾಜು ಮತ್ತು ನಕ್ಷೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುವುದು ನಿಜವೆ ?

ಇ) ಹಾಗಿದ್ದಲ್ಲಿ ಸರ್ಕಾರವು ೧೯೮೭-೮೮ರ ಸಾಲಿನಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲು ಆಡಳಿತ ಅನುಮತಿಯನ್ನು ನೀಡಿರುವುದೇ ?

ಈ) ಹಾಗಿದ್ದಲ್ಲಿ ಈ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಎಸ್. ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಕೊಟ್ಟಿರ ತಕ್ಕಂಥ ಉತ್ತರ ಸರಿಯಾಗಿಲ್ಲ. ಕಾರಣ ಹಿಂದೆ ನಗರಾಭಿವೃದ್ಧಿ ಮಂತ್ರಿಗಳು ಇದ್ದಾಗ ಈ ಬಗ್ಗೆ ಬೇರೆ ಎಸ್ಟಿಮೇಟ್ ತಯಾರು ಮಾಡಿ ಕಳುಹಿಸಿಕೊಡಬೇಕೆಂದು ಕೇಳಿದ್ದರು. ಅವರ ಆದೇಶದ ಪ್ರಕಾರ ಪ್ಲಾನ್ ಎಸ್ಟಿಮೇಟನ್ನು ತಯಾರು ಮಾಡಿ ಕಳುಹಿಸಿಕೊಟ್ಟಿದರೂ ಇದುವರೆವಿಗೂ ಈ ಕೆಲಸವನ್ನು ತೆಗೆದುಕೊಂಡಿಲ್ಲ. ಅಲ್ಲದೆ ಮಾನ್ಯ ಮುಖ್ಯ ಮಂತ್ರಿಗಳಿಗೂ ಈ ವಿಷಯವನ್ನು ತಿಳಿಸಿದಾಗ ಇದನ್ನು ಸಂಪುಟದ ಮುಂದೆ ತರಬೇಕೆಂದು ಆಜ್ಞೆಯನ್ನು ಮಾಡಿದ್ದರು. ಆದ್ದರಿಂದ ಕೂಡಲೇ ಬೈಲಹೊಂಗಲ ಪಟ್ಟಣದಲ್ಲಿ ನೆಲಮಟ್ಟದ, ಮೇಲ್ಮಟ್ಟದ ಜಲಸಂಗ್ರಹಾಗಾರವನ್ನು ನಿರ್ಮಿಸಲು ಸಚಿವ ಸಂಪುಟದ ಮುಂದೆ ಇದನ್ನು ತಂದು, ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರು ಇದಕ್ಕೆ ೩೨ ಲಕ್ಷ ರೂಪಾಯಿಗಳು ತಗಲುವುದೆಂದು ಅಂದಾಜು ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದಾರೆ, ಇದನ್ನು ಸರ್ಕಾರದ ಪರಿಶೀಲನೆಗೆ ಕಳುಹಿಸಿಕೊಡಬೇಕಾಗಿದೆ, ಕಳುಹಿಸಿದ ಮೇಲೆ ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೋ ಆದನ್ನು ನೋಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ದೂರದರ್ಶನ ಕೇಂದ್ರವನ್ನು ಸ್ಥಾಪಿಸುವುದು

೧೩೬. ಶ್ರೀ ಅಜ್ಜೀಬಾಳ ಜಿ. ಎಸ್. ಹೆಗಡೆ (ಅಂಕೋಲ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡದಲ್ಲಿ ದೂರದರ್ಶನ 'ಚಾನಲ್' ಸ್ಥಾಪಿಸಿರುವ ಬಗ್ಗೆ ಸ್ಥಳ ನಿರ್ದಿಷ್ಟ ಆಗಿದೆಯೆ?

ಆ) ಹಾಗಿದ್ದಲ್ಲಿ ಇದರಿಂದ ಇಡೀ ಜಿಲ್ಲೆಯ ಜನರಿಗೆ ಪ್ರಯೋಜನ ಆಗುವುದೇ ?

ಶ್ರೀ ಎಂ. ಪಿ ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.